**ಸಾದರ ಮಂಗಲ ಗ್ರಾಮದಲ್ಲಿ ಹಸಿರು ವಲಯ ವ್ಯಾಪ್ತಿಯಲ್ಲಿ ಬರುವ ಭೂಮಿಯನ್ನು ಬಿ.ಡಿ.ಎ.ದಿಂದ ವೈಕಾನ್ ಲಿಮಿಟೆಡ್ ಇವರಿಗೆ ಹಂಚಿಕೆ.**

1670. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಸಾದರ ಮಂಗಲ ಗ್ರಾಮದಲ್ಲಿ ಹಸಿರು ವಲಯ ವ್ಯಾಪ್ತಿಯಲ್ಲಿ ಬರುವ ಭೂಮಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವೈಕಾನ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಿದೆಯೇ?

ಆ) ಹಾಗಿದ್ದಲ್ಲಿ ಹಂಚಿಕೆಯಾಗಿರುವ ಭೂಮಿಯ ವಿಸ್ತೀರ್ಣ?

ಇ) ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಹಂಚಿಕೆ ಮಾಡಿದೆ?

ಈ) ವೈಕಾನ್ ಲಿಮಿಟೆಡ್‌ನವರು ಮೇಲಿನ ಭೂಮಿಗಾಗಿ ಸಂದಾಯ ಮಾಡಿರುವ ಹಣ?

ಉ) ಸದರಿ ಭೂ ಹಂಚಿಕೆಯನ್ನು ರದ್ದುಪಡಿಸಲು ಮತ್ತು ಸಾರ್ವಜನಿಕರಿಗಾಗಿ ನಿವೇಶನ ರಚಿಸಲು ಜನರಿಂದ ಬೇಡಿಕೆ ಏನಾದರೂ ಇದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

**ಬೆಂಗಳೂರು ಸಂಚಾರಿ ಪೋಲೀಸರು ವಸೂಲಿ ಮಾಡಿದ ದಂಡದ ಮೊಬಲಗು**

1812. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ನೇ ಇಸವಿ ಜನವರಿ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಬೆಂಗಳೂರು ಸಂಚಾರಿ ಪೋಲೀಸರು ವಸೂಲಿ ಮಾಡಿದ ದಂಡದ ಮೊಬಲಗು ಎಷ್ಟು (ಮಾಹಿಯಾನ ಅಂಕಿ ಅಂಶಗಳನ್ನು ಒದಗಿಸುವುದು):

ಆ) ಸಂಚಾರಿ ಪೋಲೀಸರು ಮೊಕದ್ದಮೆಗಳನ್ನು ವಿವೇಚನಾರಹಿತವಾಗಿ ದಾಖಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ:

ಇ) ಮೊಕದ್ದಮೆಗಳನ್ನು ದಾಖಲು ಮಾಡುವ ಬದಲು. ಸಾರ್ವಜನಿಕರಿಗೆ ಎಚ್ಚರಿಕೆ ನೀಡಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

| ಆ) ಮಾಹೆ | ಮೊಬಲಗು (ರೂ.ಗಳಲ್ಲಿ) |
|---|---|
| ಜನವರಿ 1991 | 7.63.096-00 |
| ಫೆಬ್ರವರಿ 1991 | 8.00.236-00 |
| ಮಾರ್ಚ್ 1991 | 8.30.873.60 |
| ಏಪ್ರಿಲ್ 1991 | 8.83.107-30 |
| ಮೇ 1991 | 9.54.033-00 |
| ಜೂನ್ 1991 | 11.57.719-20 |
| ಜುಲೈ 1991 | 14.06.011-50 |
| ಆಗಸ್ಟ್ 1991 | 14.65.989-00 |
| ಸೆಪ್ಟೆಂಬರ್ 1991 | 11.94.656-60 |
| ಅಕ್ಟೋಬರ್ 1991 | 9.86.395-00 |
| ನವೆಂಬರ್ 1991 | 11.45.985-00 |
| ಡಿಸೆಂಬರ್ 1991 | 9.11.554-60 |
| ಒಟ್ಟು | **1,24,99,656-80** |

ಆ) ಇಲ್ಲ.

ಇ) ಸಂಚಾರಿ ಪೋಲೀಸರು ಸಾರ್ವಜನಿಕರಿಗೆ ಸಂಚಾರಿ ಅಪರಾಧಗಳ ಬಗ್ಗೆ ತಿಳುವಳಿಕೆ ಕೊಟ್ಟು, ಅವನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತಾರೆ :

(1) ಪ್ರಚಾರ. (2) ಸಂಚಾರಿ ವ್ಯವಸ್ಥೆಯ ಬಗ್ಗೆ ಚಲನಚಿತ್ರ ಪ್ರದರ್ಶನಗಳನ್ನು ಏರ್ಪಡಿಸುವುದು. (3) ಸಾರ್ವಜನಿಕರಿಗೆ ಸಂಚಾರಿ ನಿಯಮಗಳ ಬಗ್ಗೆ ಪ್ರತಿವರ್ಷ ಸಂಚಾರಿ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡುವುದು. (4) ಸಂಚಾರಿ ಸುರಕ್ಷತಾ ಸಪ್ತಾಹಗಳನ್ನು ಆಚರಿಸುವುದು. (5) ಶಾಲಾಮಕ್ಕಳಿಗೆ, ವಿದ್ಯಾರ್ಥಿ ಸಂಘಸಂಸ್ಥೆಗಳ ಮತಿಯಿಂದ ಸಂಚಾರಿ ನಿಯಮಗಳ ಬಗ್ಗೆ ತರಬೇತಿ ನೀಡುವುದು.

### ಬೆಂಗಳೂರು ಜಲಮಂಡಲಿಯ ಸಂಚಾರಿ ಶುಲ್ಕ ಪಾವತಿ

1811. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜನತೆಯಿಂದ ನೀರಿನ ಬಿಲ್‌ಗಳ ಹಣ ಪಾವತಿ ಮಾಡಲು ಬೆಂಗಳೂರು ಜಲ ಮಂಡಲಿಯು ಸಂಚಾರಿ ಶುಲ್ಕ ಪಾವತಿ ಮಾಡುವ ವ್ಯವಸ್ಥೆ ಇದೆಯೇ?